ಹೋಗುತ್ತಾನೆ. ಆದರೆ ಮುದ್ರಕ ಸಾಹಿತಿಯೂ ಆದರೆ ಅದರಿಂದ ಅವನಿಗೆ ತುಂಬಾ ಪ್ರಯೋಜನವಿದೆ. ತನಗೆ ತಿಳಿಯದ್ದನ್ನು ಈಗ ತಿಳಿದುಕೊಳ್ಳುತ್ತಾನೆ. ಅದರಲ್ಲೂ ಡಿವಿಜಿಯವರಂಥ ದಿಗ್ಗಜಗಳ ಪುಸ್ತಕಗಳನ್ನು ಮುದ್ರಣ ಮಾಡುವುದು ಎಂದರೆ? ಪ್ರೂಫ್ ನೋಡುವುದು ಒಂದೇ ಅಲ್ಲ. ಒಂದೆರಡು ಸಲ ಬೆಂಗಳೂರಿಗೆ ಡಿವಿಜಿಯವರ ಮನೆಗೆ ಈ ಕೆಲಸವಾಗಿ ಹಾಗೂ ಬೇರೆ ಕೆಲಸಗಳಿಗಾಗಿ ಚಿದಂಬರಂ ನನ್ನನ್ನು ಕಳಿಸಿಕೊಟ್ಟರು.

ಇದಕ್ಕೆ ಮೊದಲು, ನಾನು ಬೆಂಗಳೂರಿನಲ್ಲಿಯೇ ಇದ್ದಾಗ, ಅನೇಕ ಸಭೆ, ಸಮಾರಂಭಗಳಲ್ಲಿ ಡಿವಿಜಿಯವರನ್ನು ನೋಡಿದ್ದರೂ ಅವರ ಭಾಷಣಗಳನ್ನು ಕೇಳಿದ್ದರು, ಅವರ ಮನೆಗೆ ಹೋಗುತ್ತ ಇರುವುದು, ಅವರೊಂದಿಗೆ ಮಾತಾಡುವುದು ಇದೇ ಮೊದಲು.

'ನಿಮ್ಮ ಬಗ್ಗೆ ಚಿದಂಬರಂ ತುಂಬಾ ಹೇಳಿದ್ದಾರೆ' ಎಂದು ಅವರ ಸ್ವಾಗತ.

ಡಿವಿಜಿಯವರಿಗೆ ಹಿರಿಯರು ಕಿರಿಯರು ಎನ್ನುವ ಭೇದವಿಲ್ಲ. ಎಲ್ಲರೂ ಅವರಿಗೆ ಸರಿಸಮಾನರು. ಎಲ್ಲರೊಂದಿಗೂ ಹರಟೆ. ವಿದ್ವತ್ತಿನಲ್ಲಿ ಹೇಗೋ ಹಾಗೆ ಪೋಲಿ ಜೋಕುಗಳನ್ನು ಹಾರಿಸುವುದರಲ್ಲಿಯೂ ಅವರು ಪ್ರಸಿದ್ಧರು. ಆಮೇಲೆ ಬೇರೆಯವರಿಗೆ ಭರ್ಜರಿಯಾಗಿ ಹೊಟ್ಟೆ ತುಂಬಿಸಲೂ ಬೇಕು. ಹಾಗಾದರೆ ಅವರಿಗೆ ತೃಪ್ತಿ.

★★★

'ಮಂಕುತಿಮ್ಮನ ಕಗ್ಗ' ಮುದ್ರಣ ಮುಗಿಸಿದ ಎಷ್ಟೋ ವರ್ಷಗಳ ಮೇಲೆ, ಮತ್ತೆ ಡಿವಿಜಿಯವರೊಂದಿಗೆ ಸಮೀಪವಾಗಿ ಒಡನಾಡುವ ಭಾಗ್ಯ ನನಗೆ ಲಭಿಸಿತ್ತು.

ಹೌದು, ಈಗ ನನ್ನದೇ ಪ್ರೆಸ್ ಪ್ರಾರಂಭವಾಗಿತ್ತು. ನಮ್ಮ ಪ್ರೆಸ್ಸಿನಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಯ **PUBLIC AFFAIRS** ಮುದ್ರಣವಾಗುತ್ತಿತ್ತು. ಕೆಲವು ತಿಂಗಳ ಕಾಲ ಈ ಪತ್ರಿಕೆಗೆ ನಾನು ಮುದ್ರಕನಾಗಿದ್ದೆ.

ಆಗ ನಾನು ಒಂದು ದಿನ 'ಸಾರ್, ಇಷ್ಟು ವರ್ಷಗಳ ಹಿಂದೆ ನಾನು 'ಮಂಕುತಿಮ್ಮನ ಕಗ್ಗ' ನೋಡಿಕೊಳ್ಳುತ್ತಿದ್ದೆ. ಆಗ ನಿಮ್ಮ ಬಳಿಗೆ ಬರುತ್ತಿದ್ದೆ...' ಎಂದಾಗ.

'ಹೌದು ನಿಮ್ಮನ್ನು ಎಲ್ಲೋ ನೋಡಿದ್ದ ನೆನಪು. ಅದೇ ಯೋಚಿಸುತ್ತಾ ಇದ್ದೆ' ಎಂದರು ಡಿವಿಜಿ.

> ಡಿವಿಜಿಯವರ ಜ್ಞಾಪಕ ಚಿತ್ರಶಾಲೆಯಲ್ಲಿ ನೂರಾರು ಹಳೆಯ ಸಂಭವಗಳೂ ಚಿತ್ರಗಳೂ ವ್ಯಕ್ತಿಗಳೂ ಕಾಣಸಿಗುತ್ತಾರೆ.

ಡಿವಿಜಿಯವರ ಸ್ಮರಣಶಕ್ತಿ ಅದ್ಭುತವಾದದ್ದು. ಅವರ ಜ್ಞಾಪಕ ಚಿತ್ರಶಾಲೆಯಲ್ಲಿ ನೂರಾರು ಹಳೆಯ ಸಂಭವಗಳೂ ಚಿತ್ರಗಳೂ ವ್ಯಕ್ತಿಗಳೂ ನಮಗೆ ಕಾಣಸಿಗುತ್ತಾರೆ.

ತುಂಬಾ ಪಾಂಡಿತ್ಯವಿರುವವರು ಗಂಭೀರವಾಗಿರುತ್ತಾರೆ. ಅಂಥವರನ್ನು ಮಾತಾಡಿಸುವುದಕ್ಕೇ ಆಗದು ಎನ್ನುತ್ತಾರೆ. ಆದರೆ ಡಿವಿಜಿ ಇದಕ್ಕೆ ಅಪವಾದ. ಎಲ್ಲರೊಂದಿಗೂ ಅವರು ಸಲೀಸಾಗಿ ಬೆರೆಯಬಲ್ಲರು; ಹರಟಬಲ್ಲರು.

ಭವ್ಯವಾದ ಆಕಾರ, ಮಾತಿನಲ್ಲಿ ಧಾರಾಳ, ಆ ನಗು, ಆ ಅಟ್ಟಹಾಸ, ಆ ಆತ್ಮೀಯತೆ – ಡಿವಿಜಿಯವರ ಎತ್ತರಕ್ಕೆ ಏರಬಲ್ಲರು ಯಾರು? ಮತ್ತೊಬ್ಬ ಡಿವಿಜಿಯನ್ನು ನಮ್ಮ ಜನ್ಮದಲ್ಲಿ ನಾವು ಕಾಣುವುದು ಸಾಧ್ಯವೆ?

(ಫೆಬ್ರುವರಿ, **1999**)